ಅಧ್ಯಕ್ಷರು: ಮಾಧುಸ್ವಾಮಿಯವರೆ, ಏನೆಂದು ನನಗೆ ಅರ್ಥವಾಗುತ್ತಿಲ್ಲ. ಈಗ ಏನಾಗಿದೆ? I need not hear everybody.

ಅವರು ಮುಖ್ಯವಾಗಿ ಕೇಳಿದ್ದಾರೆ. ಹಾಗೂ ಸಾಕಷ್ಟು ಸಬ್‌ಮಿಟ್ ಮಾಡಿದ್ದಾರೆ. ಅದಕ್ಕೆ ನಾನು ರೂಲ್ 69ರಲ್ಲಿ ಅವಕಾಶ ಮಾಡಿಕೊಡುತ್ತೇನೆಂದರೆ ನೀವೆಲ್ಲರೂ ಕೇಳಬೇಕೆಂದು ಹೇಳುತ್ತೀರಿ. ಹಾಗೆ ಮಾಡಿದರೆ ಈ ನಿಲುವಳಿ ಸೂಚನೆ ಒಂದು ದಿವಸ ತರುತ್ತೀರಿ. ನಿಲುವಳಿ ಸೂಚನೆಗೆ ಹೌಸ್‌ನಲ್ಲಿ ಪೂರ್ತಿ ದಿವಸ ಆಗಿಹೋಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ ಕ್ಷಮಿಸಬೇಕು.

ಅಧ್ಯಕ್ಷರು: ನೀವು ಸೀನಿಯರ್ ಮೆಂಬರ್, ನೀವು ನಮಗೆ ಗೈಡ್ ಮಾಡಬೇಕು. ನಿಯಮ 69ಕ್ಕೆ ಮಾಡಿದ್ದೇನೆ. ನೀವು ಈ ರೀತಿ ಮಾಡಿದರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಇದು ಆಗಲೇಬೇಕು. ಇದಕ್ಕೆ ರುಜುವು ಹಾಕಿಕೊಟ್ಟಿದ್ದೇವೆ.

ಅಧ್ಯಕ್ಷರು; ಎಲ್ಲರೂ ಹೇಳಿದ್ದನ್ನು ಹಿಯರ್ ಮಾಡಬೇಕೆಂದು ಇಲ್ಲ. ನಿಯಮ 69ಕ್ಕೆ ಮಾಡಿದ್ದೇವೆ. ಅವಕಾಶ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಈಗ ನಾವೇ ನಿಯಮ 69ಕ್ಕೆ ಕೊಡುತ್ತಿದ್ದೆವು. ಆದರೆ ಅದು ಬಹಳ ಪ್ರಾಮುಖ್ಯವಾದ ವಿಷಯ. ಆದ್ಯತೆ ಮೇಲೆ ಚರ್ಚೆಯಾಗಲಿ.

ಅಧ್ಯಕ್ಷರು: ಆದ್ಯತೆ ಮೇಲೆ ಮಾಡಿದ್ದೇನೆ. ನಿಯಮ 69ರಲ್ಲಿ ಅವಕಾಶ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅದು ಯಾವಾಗಲೂ ಬರುತ್ತದೆ. ಇವತ್ತು ಇದನ್ನು ಅರ್ಧಗಂಟೆಯಲ್ಲಿ ಮುಗಿಸಿಬಿಡಿ.

ಅಧ್ಯಕ್ಷರು: ಆಯಿತು ಕೊಡೋಣ, ಸಮಯ ಗೊತ್ತು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ ನಿಲುವಳೀ ಸೂಚನೆ ಆದರೆ ಒಳ್ಳೆಯ ಶಕ್ತಿ ಬರುತ್ತದೆ. ತಾವು ಪ್ರಧಾನಿ ಹಾಗೂ ಗೃಹ ಸಚಿವರನ್ನು ಭೇಟಿ ಮಾಡಿದಿರಿ, ಅದಕ್ಕೆ ಒಂದು ಶಕ್ತಿ ಬರಬೇಕಲ್ಲ, ಪ್ರಕಾಶ್‌ರವರೆ...

ಅಧ್ಯಕ್ಷರು: ಈಗ ಮನೋಹರ್ ಕಿನೇಕರ್ ಅವರು ತಾವು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು. ತಾವು ಇಂಗ್ಲೀಷ್‌ನಲ್ಲಿ ಮಾತನಾಡಬೇಕು. ಎಲ್ಲಾ ಸಾಮರಸ್ಯ ಬೇಕು. ಆದುದರಿಂದ ಕನ್ನಡ ಬಂದರೆ ಕನ್ನಡದಲ್ಲಿ ಮಾತನಾಡಿ, ಬರಲೇ ಇಲ್ಲ ಎಂದರೆ ಇಂಗ್ಲೀಷ್‌ನಲ್ಲಿ ಮಾತನಾಡಿ.

Sri Manohar kallappa Kinekar: I cannot speak in kannada, If permit me to speak in Hindi that will be better, That will be recorded Know?

ಅಧ್ಯಕ್ಷರು: ಹಿಂದಿಯಲ್ಲಿ ಮಾತನಾಡಿದರೆ ಆಗುವುದಿಲ್ಲ. ಹಿಂದಿಯಲ್ಲಿ ಮಾತನಾಡಿದರೆ ಟ್ರಾನ್ಸ್‌ಲೇಷನ್‌ಗೆ ಅವಕಾಶ ಇದೆ. ಆದರೆ ಮೊದಲೆ ನಾನು ಹಿಂದಿಯಲ್ಲಿ ಮಾತನಾಡುತ್ತೇನೆ ಎಂದು ನಮಗೆ ತಿಳಿಸಬೇಕು. ತಿಳಿಸಿದ್ದರೆ ಆಗ ಟ್ರಾನ್ಸ್‌ಲೇಷನ್ ವ್ಯವಸ್ಥೆ ಮಾಡುತ್ತೇವೆ. ಅದು ರೆಕಾರ್ಡ್‌ಗೆ ಹೋಗುತ್ತದೆ. ಇದ್ದಕ್ಕಿದ್ದ ಹಾಗೆ ಹಿಂದಿಯಲ್ಲಿ ಮಾತನಾಡಿದರೆ ಆಗುವುದಿಲ್ಲ.

Sri Manohar kallappa Kinekar: What about my colleague who doesn't know kannada or English?

ಅಧ್ಯಕ್ಷರು: ನೀವು ಮಾತನಾಡಿ ಅವರದು ನೋಡೋಣ

Sri Manohar kallappa Kinekar: I can manage with English But my colleague doesn`t know English or Kannada. please allow him to speak in Hindi. He wants to tell his difficulties.

Mr. Speaker: Are you creating problem?

ಸಿ.ಟಿ.ರವಿ: ಕನ್ನಡ ಬರದೆ ಇದ್ದರೆ ಪರವಾಗಿಲ್ಲ. ಆದರೆ ಹೊರಗಡೆ ನಮ್ಮ ಹತ್ತಿರ ಮಾತನಾಡಬೇಕಾದರೆ ಕನ್ನಡದಲ್ಲಿ ಮಾತನಾಡುತ್ತಾರೆ. ಆದರೆ ಇಲ್ಲಿ ಬಂದಾಗ ಇವರಿಬ್ಬರಿಗೆ ಏನು ಮಾತನಾಡುವುದಕ್ಕೆ? ಓಟು ಹಾಕುವವರು ಹೇಗೋ ಹಾಕಿದ್ದಾರೆ.

ಅಧ್ಯಕ್ಷರು: ಮಾತನಾಡಿ, ತಾವು ಕೇಳಿ.

Sri Manohar kallappa Kinekar(Uchagaon): Hon`ble Adhyaksha, because of heavy rains in Belgaum in the last 15 days farmer have suffered too much. Because of flood 2-3 people have flown away in the Markandeya river. Government has paid compensation to them but that is really a very small amount Rs.50,000. So, I request the government to increase that amout. Under Natural calamity for one death of the farmer that amount should be minimum Rs. 5 Lakhs. If any other fel-

low serving in other department or private, he will get insurance and other things. But farmers cannot get anything except this government support. So, I request to increase this compensation to Rs. 5 Lakshs to support their families.

Secondly, in Belgaum nearly 10,000 to 15000 acres of plantation is there every year. This year also farmers have completed this plantation of potato from 15th June to 25th June. For this acreage of platation nearly 90,000 to One lakh quintals of potato seed is required. In the market the rate per quintal is between Rs. 1000to 1200. Because of heavy rains almost all crops of this plantation is damaged before germination it self. This is a huge loss to the farmers. If you don`t support the farmaers it is very difficult for them to survive, So, I request the government to make a survey and give then compensation so that they can survive.

Another thing, there is Bellary Naala. Every yeat because of the flood it is silted-up fully. water cannot flow out of it because of which nearly 1000 to 2500 acres of paddy is damaged this year. Everybody knows this is a historical problem. But no action has been taken. We requested the Deputy Commissioner also. He has asked the government to provide nearly Rs. 25 Lakhs. But the government has not sanctioned same thing has occured this year also, because of this flood 1000 to 1500 acres of paddy is spoiled. Famers are under loss. They are from vadaga, Damane, Yellur and Belgaum. So. I request the Government to give compensation to this paddy-holders also and take up the work of desilting that Naala so that the problem is sloved completely. thirdly, because of the rains almost all roads are damaged. Buses to villages are stopped. I request the Hon`ble Minister to visit Belgaum and

Khanapura taluks and see the position. Now the students cannot go to the city for education because the buses have stopped. I request the government to look into this. you should also provide flood relief amount to Belgaum district. That is my request. I thank the Hon`ble Speaker for the time given.

ಶ್ರೀ ಎಂ.ಪಿ ಪ್ರಕಾಶ್(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ಮನೋಹರ್ ಕಿನೇಕರ್ ಅವರು ತಿಳಿಸಿದಂತಹ ವಿಚಾರಕ್ಕೆ ಉತ್ತರ " ಬೆಳಗಾವಿ ಜಿಲ್ಲೆಯ ಮಾರ್ಕಂಡೇಯ ಮತ್ತು ಹಿರಣ್ಯಕೇಶಿ ನದಿಗಳಲ್ಲಿ ಉಂಟಾದ ಪ್ರವಾಹದಲ್ಲಿ ಒಟ್ಟು 5 ಜನ ಸಾವನ್ನಪ್ಪಿದ್ದಾರೆ" ಮಾರ್ಕಂಡೇಯ ನದಿಯಲ್ಲಿ ಅಳತ್ತುಗ ಗ್ರಾಮದ ಈ ಕೆಳಕಂಡವರು ಮೃತಪಟ್ಟಿದ್ದಾರೆ. ಒಂದು ದುರ್ಗಾರಾಮ್ ಸಿದ್ಧರಾಮ್ ಕಾನ್ ಬಾರ್ಕರ್, ಸುಭಾಷ್ ನಿಂಗಪ್ಪ ಭಾವನೇ, ಭವಕನ್ ಲಕ್ಷ್ಮಣ್ ಬೆಳಗಾಂವಕರ್, ಕುದುರೆಮನೆ ಗ್ರಾಮದಲ್ಲಿ ಮನೆ ಕುಸಿದಿದ್ದರಿಂದ ಕುಮಾರಿ ತೃಪ್ತಿ ಗುರುನಾಥ ಪಾಟೀಲ್ ಎಂಬುವವರು ಮೃತಪಟ್ಟಿರುತ್ತಾರೆ. ಹಿರಣ್ಯ ಕೇಶಿ ನದಿಯಲ್ಲಿ ತನ್ವೀರ್ ಹುಸೇನ್ ಎಂಬುವವರು ನದಿಯಲ್ಲಿ ಸ್ನಾನ ಮಾಡುವಾಗ ಮೃತಪಟ್ಟಿರುತ್ತಾರೆ. ಬೆಳಗಾವಿ ತಾಲೂಕಿನಲ್ಲಿ ಆಲೂಗಡ್ಡೆ ಮತ್ತು ಭತ್ತದ ಬೆಳೆ ನಷ್ಟವಾಗಿದ್ದು, ಇದರ ಬಗ್ಗೆ ಕೃಷಿ ಇಲಾಖೆಯಿಂದ ನಷ್ಟದ ಬಗ್ಗೆ ಅಂದಾಜು ಮಾಡಲಾಗುತ್ತಿದೆ. ಮೃತ ಪಟ್ಟವರಿಗೆ ಸಿಆರ್‌ಎಫ್ ನಿಧಿ ಅಡಿಯಲ್ಲಿ ತಲಾ 50 ಸಾವಿರ ರೂಪಾಯಿಯಂತೆ ಪರಿಹಾರ ನೀಡಲಾಗಿದೆ. ನೆರೆಯಿಂದ 5 ಜಾನುವಾರುಗಳು ಮೃತಪಟ್ಟಿರುತ್ತವೆ. ಜಿಲ್ಲಾಧಿಕಾರಿಗಳು ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಂಡಿರುತ್ತಾರೆ. ಮತ್ತು ಪರಿಸ್ಥಿತಿ ನಿಯಂತ್ರಣದಲ್ಲಿದೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಮೃತಪಟ್ಟವರಿಗೆ 5 ಲಕ್ಷ ರೂಪಾಯಿ ಪರಿಹಾರವನ್ನು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಅದು ಅವರ ಸದುದ್ದೇಶದ ಮಾತು ಮತ್ತು ಅದರಂತೆ ಕೊಡಬೇಕೆಂದು ಸರ್ಕಾರಕ್ಕೆ ಆಸೆ ಇದ್ದರೂ ಕೂಡಾ ಕೇಂದ್ರ ಸರ್ಕಾರ ಎನ್‌ಸಿಸಿಎಫ್ ಮತ್ತು ಸಿಆರ್‌ಎಫ್ ಪ್ರಕೃತಿ ವಿಕೋಪ ನಿಧಿಯಡಿಯಲ್ಲಿ ಒಂದು ಮಾರ್ಗಸೂಚಿಗಳಿವೆ. ಆ ಮಾರ್ಗಸೂಚಿಯಲ್ಲಿ ಒಂದು ಲಕ್ಷ ರೂಪಾಯಿ ಕೊಡುತ್ತಿದ್ದುದ್ದು ಕೂಡ 50 ಸಾವಿರ ರೂಪಾಯಿಗೆ ಇಳಿಸಿರುವುದರಿಂದ, ಆ ಮಾರ್ಗಸೂಚಿಗೆ ಅನುಗುಣವಾಗಿ ನಾವು ಹಣ ಕೊಟ್ಟಿದ್ದೇವೆ. ಉಳಿದಂತೆ ಆಲೂಗಡ್ಡೆ ವಿಚಾರದಲ್ಲಿ ನಷ್ಟದ ಬಗ್ಗೆ ಕೃಷಿ ಇಲಾಖೆಯವರು ಈಗಾಗಲೇ ವರದಿಯನ್ನು ತಯಾರು ಮಾಡುತ್ತಿದ್ದಾರೆ. ಆ ವರದಿ ಕೈ ಸೇರಿದ ನಂತರ ಸರ್ಕಾರ ತಾವು ಹೇಳಿದಂತೆ ಎಲ್ಲಿ ಮೊಳಕೆಯೊಡೆಲಾರದ ಹಾಗೆ ರೈತರಿಗೆ ಪ್ರವಾಹ ಕಾರಣದಿಂದ ತೊಂದರೆಯಾಗಿದೆ.

ಅದಕ್ಕೆ ಸಂಪೂರ್ಣವಾದಂತಹ ಸಹಾಯವನ್ನು ಮಾಡುವುದಕ್ಕೆ ಸರ್ಕಾರ ತಯಾರಿದೆ. ಎನ್ನುವ ಮಾತನ್ನು ಹೇಳುತ್ತಾ. ಇನ್ನು ರಸ್ತೆ ಮಾಡುವಂತಹ ವಿಚಾರದಲ್ಲಿಯೂ ಕೂಡ ನಾವು ಪ್ರವಾಹ ಪರಿಹಾರ ನಿಧಿಯಡಿಯಲ್ಲಿ ಕೆಲವು ಹಣವನ್ನು ಕೊಡುತ್ತೇವೆ. ಇನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯವರು ಕೂಡ ಇದರಲ್ಲಿ ಕ್ರಮ ಕೈಗೊಳ್ಳುತ್ತಾರೆ ಎಂದು ಹೇಳಿ ಸದನದ ಮೂಲಕ ನಮಗೆ ವಿನಂತಿಯನ್ನು ಮಾಡುತ್ತೇನೆ.

ಅಧ್ಯಕ್ಷರು: ಈಗ ಎಂ.ಟಿ. ಕೃಷ್ಣಪ್ಪ, ದಯಮಾಡಿ ಕುಳಿತುಕೊಳ್ಳಿ ಇದು ಶೂನ್ಯವೇಳೆ, ಕೆ. ರಘುಪತಿ ಭಟ್, ಎಸ್.ಎಲ್. ಧರ್ಮೇಗೌಡ, ಕೆ.ಎಸ್. ಈಶ್ವರಪ್ಪ, ಗೋಪಾಲಕೃಷ್ಣ ಬೇಳೂರು ಎಲ್ಲ ಕೊಟ್ಟಿದ್ದಾರೆ ಯಾರೂ ಇಲ್ಲ. ರಾಜೇಂದ್ರನ್ ನೀವು ಜೀರೋ ಅವರ್‌ನಲ್ಲಿ ಕೇಳುತ್ತೇನೆಂದು ಹೇಳಿದ್ದೀರಲ್ಲ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ನಾನು ಬಹಳ ಮುಖ್ಯವಾಗಿ ಕುಡಿಯುವ ನೀರಿನ ಬಗ್ಗೆ ಕಾಲಿಂಗ್ ಅಟೆನ್‌ಷನ್ ಹಾಕಿದ್ದೆ...

ಅಧ್ಯಕ್ಷರು: ಈಗ ನೀವು ಕೇಳಿರುವುದು ಅನಧಿಕೃತವಾಗಿ ಕಾಂಪೌಂಡ್ ಹಾಕಿದ್ದಾರೆ, ಬೋರ್‌ವೆಲ್ ಹಾಕಿಬಿಟ್ಟಿದ್ದಾರೆ ಎಂದು

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಮುನ್ಸಿಪಾಲಿಟಿ ಮಂತ್ರಿಗಳು ಇಲ್ಲ. ಬಂದ ಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು: ದಯಮಾಡಿ ಕೇಳಿ, ಜೀರೋ ಅವರ್‌ನಲ್ಲಿ ಕಳುಹಿಸುತ್ತೀರಿ. ಅದಕ್ಕೆ ಡಿಪಾರ್ಟ್‌ಮೆಂಟ್‌ನ ಮಂತ್ರಿಗಳು ಬರಬೇಕು ಎಂದಿಲ್ಲ. ಸರ್ಕಾರದ ಪರವಾಗಿ ಉತ್ತರ ಹೇಳುತ್ತಾರೆ. ಅದು ಬಿಟ್ಟು ಈಗ ನೀವು ಕೇಳಿ ಎಂದರೆ, ಏಕೆ ಜಿರೋ ಅವರ್ ಕೊಡುತ್ತೇವೆ? ಎಂದರೆ I can`t understand. ಆಯಿತು, ನೀವು ಕೇಳುವುದಕ್ಕೆ ರೆಡಿ ಇಲ್ಲವೆಂದರೆ ಮುಂದೆ ಹೋಗೋಣ ಬಿಡಿ

ಶ್ರೀ ಎಸ್. ರಾಜೇಂದ್ರನ್(ಕೆ.ಜಿ.ಎಫ್): ಮಾನ್ಯ ಅಧ್ಯಕ್ಷರೇ, ನಾನು ಏನು ತಪ್ಪು ಮಾಡಿಲ್ಲ. ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ಸರ್ಕಾರಿ ಜಮೀನನ್ನು ಕಾಂಪೌಂಡ್ ಮಾಡಿಕೊಂಡಿದ್ದಾರೆ. ನಾನು ಸರ್ಕಾರಕ್ಕೆ, ಡಿ.ಸಿಯವರಿಗೆ ಮತ್ತು ಮುನಿಸಿಪಾಲಿಟಿಯ ಕಮೀಷನರ್‌ರವರಿಗೆ ಲೆಟರ್ ಅನ್ನು ಬರೆದಿದ್ದೇನೆ. There is no action. where Ihave to plead? Tell me.

ಇದರ ಬಗ್ಗೆ ಮಾನ್ಯ ಮಂತ್ರಿಯವರಿಗೆ ಹೇಳಿದರೆ, ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ನಾವು ಡೆಪ್ಯೂಟಿ ಕಮೀಷನರ್‌ರವರಿಗೆ ಲೆಟರ್ ಕೊಟ್ಟಿದ್ದೇವೆ. ಇದರ ಸರ್ವೆ ನಂಬರ್ ಅನ್ನು ಕೊಟ್ಟಿದ್ದೇವೆ. ತಾಲೂಕು ಮ್ಯಾಜಿಸ್ಟ್ರೇಟ್